# ಮಂಗಳೂರು ಅರಣ್ಯ ವಿಭಾಗದಲ್ಲಿ ಲೋಕಾರ್ಪಣೆಗೆ ಸಿದ್ಧಗೊಂಡ "ಸಾಲುಮರದ ತಿಮ್ಮಕ್ಕ" ವೃಕ್ಷೋದ್ಯಾನವನಗಳು

1. ಬೆಳ್ತಂಗಡಿ ವಲಯದ ಕಲ್ಲಗುಡ್ಡೆ ಎಂಬಲ್ಲಿ 10.68 ಹೆ. ಪ್ರದೇಶದಲ್ಲಿ "ಸಾಲುಮರದ ತಿಮ್ಮಕ್ಕ" ನಾಮಾಂಕಿತ ವೃಕ್ಷೋದ್ಯಾನವನ ಇದರ ಕಾಮಗಾರಿ ಸಂಪೂರ್ಣಗೊಂಡಿದ್ದು, 2019–20 ನೇ ಸಾಲಿನಲ್ಲಿ ಲೋಕಾರ್ಪಣೆಗೆ ಸಿದ್ಧಗೊಂಡಿರುತ್ತದೆ. ಬೆಳ್ತಂಗಡಿ ನಗರದಿಂದ 3.00 ಕಿ.ಮೀ ದೂರದಲ್ಲಿರುವ ವೃಕ್ಷೋದ್ಯಾನವನದಲ್ಲಿ ವಾಕಿಂಗ್ ಪಾತ್, ಪರಾಗೋಲ, ಪಶ್ಚಿಮ ಘಟ್ಟದ ತಳಿಯ ಮರಗಳು, Children Park , ಔಷಧೀಯ ಸಸಿಗಳು – ಅವುಗಳ ಉಪಯುಕ್ತತೆ ಬಗ್ಗೆ ಮಾಹಿತಿ ಹೊಂದಿರುವ ಸೈನೇಜಸ್, 108 ಜಾತಿಯ ವೃಕ್ಷಗಳು, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯ ಇತ್ಯಾದಿ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ. ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಬರುವ ಸಾವಿರಾರು ಭಕ್ತಾಧಿಗಳಿಗೆ ಇದೊಂದು ಪ್ರವಾಸಿ ತಾಣವಾಗಲಿದೆ. ಅರಣ್ಯ ಮತ್ತು ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಪೂರಕವಾಗಿದೆ.






2. ಪುತ್ತೂರು ವಲಯದ ಬೀರಮಲೆಗುಡ್ಡೆ ಎಂಬಲ್ಲಿ 6.475 ಹೆ. ಪ್ರದೇಶದಲ್ಲಿ "ಸಾಲುಮರದ ತಿಮ್ಮಕ್ಕ" ನಾಮಾಂಕಿತ ವೃಕ್ಷೋದ್ಯಾನವನ ನಿರ್ಮಾಣಗೊಂಡಿದ್ದು ಲೋಕಾರ್ಪಣೆಗೆ ಸಿದ್ಧಗೊಂಡಿರುತ್ತದೆ. ಪುತ್ತೂರು ನಗರದ ವ್ಯಾಪ್ತಿಯೊಳಗೆ ಬರುತ್ತಿದ್ದು, ಸಮುದ್ರ ಮಟ್ಟದಿಂದ 550 ಅಡಿಗಳಷ್ಟು ಎತ್ತರದಲ್ಲಿದ್ದು, ಪುತ್ತೂರು ನಗರದ ಸುಂದರ ನೋಟವನ್ನು ಇಲ್ಲಿಂದ ವೀಕ್ಷಿಸಬಹುದಾಗಿದೆ. ಈ ವೃಕ್ಷೋದ್ಯಾನವನದಲ್ಲಿ ವಾಕಿಂಗ್ ಪಾತ್, ಪರಾಗೋಲ, ಪಶ್ಚಿಮ ಘಟ್ಟದ ತಳೀಯ ಮರಗಳು, Children Park , ಔಷಧೀಯ ಸಸಿಗಳು ಅವುಗಳ ಉಪಯುಕ್ತತೆ ಬಗ್ಗೆ ಮಾಹಿತಿ ಹೊಂದಿರುವ ಸೈನೇಜಸ್, 108 ಜಾತಿಯ ವೃಕ್ಷಗಳು, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯ ಇತ್ಯಾದಿ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ. ಈ ವೃಕ್ಷೋದ್ಯಾನವನವು ಅರಣ್ಯ ಮತ್ತು ಪರಿಸರ ಪ್ರೇಮಿಗಳಿಗೆ ಇನ್ನೊಂದು ಪ್ರೇಕ್ಷಣೀಯ ಸ್ಥಳವಾಗಲಿದೆ.




